ವ್ಯಾಜ್ಯಗಳು ಯಾಕಾದರೂ ಸಿಕ್ಕು ಸಿಕ್ಕಾಗಿ ಸುತ್ತು ಹಾಕಿಕೊಳ್ಳುತ್ತವೆ? ಅವು ತಾವಾಗಿಯೇ ಒಂದು ಗಂಟಲನ್ನು ಅಮರಿಕೊಳ್ಳದಿದ್ದರೂ, ಸ್ವತಃ ಆಹ್ವಾನಿಸಿ ಆ ವಿಷ ವರ್ತುಲದಲ್ಲಿ ಆಹುತಿಯಾಗುವ ಪರಿಯೇ ದಾರುಣವಾದುದು. ಕೆಲವರಿಗಂತೂ ತರಲೆ ವ್ಯಾಜ್ಯಗಳೇ ಬದುಕು. ಆದರೆ ಅವನು ವ್ಯಾಜ್ಯಗಳಿಂದ ರೋಸಿ ಹೋಗಿದ್ದ. ಯಾವ ಗಳಿಗೆಯಲ್ಲಿ ಅವನು ನ್ಯಾಯಾಧೀಶರ ಹುದ್ದೆಯನ್ನು ಒಪ್ಪಿಕೊಂಡಿದ್ದನೋ ಅಂದಿನಿಂದ ಅವನು ತನ್ನ ಸುತ್ತಲೂ ಒಂದು ಬೇಲಿಯನ್ನು ಕಟ್ಟಿಕೊಂಡಿದ್ದ. ಅದು ಮುಳ್ಳು ಬೇಲಿಯೋ ಕಳ್ಳಿ ಬೇಲಿಯೋ ಅಥವಾ ವಿದ್ಯುತ್ ಬೇಲಿಯೋ... ಆದರೆ ಅವನ ಮತ್ತು ಸಮಾಜದ ನಡುವೆ ನಿಷೇಧದ ಕಂದಕವನ್ನು ತೋಡಿದ್ದಂತೂ ನಿಜ. ಬೇಲಿಯು ಅವನನ್ನು ಸುತ್ತುವರೆದು ಒಮ್ಮೊಮ್ಮೆ ಅವನ ಆಹುತಿಯನ್ನು ಪಡೆಯುವಂತೆ ಹೆದರಿಸುತ್ತಿತ್ತು. ಒಮ್ಮೊಮ್ಮೆ ಅವನಿಗೆ ಅತ್ಯಂತ ಸುರಕ್ಷತೆಯನ್ನು ನೀಡುವ ಕವಚದಂತೆ ಆಕರ್ಷಕವಾಗಿ ಕಂಡು ಬರುತ್ತಿತ್ತು. ಮಗುದೊಮ್ಮೆ ಕೋಡುಗಳನ್ನು ಎತ್ತಿ ಹಾಯುವ ಕೋಣದಂತೆ ಕೆಣಕುತ್ತಿತ್ತು. ಅಂದು ಕೂಡಾ ಅವನಿಗೆ ಅಪಾರವಾಗಿ ಸೋರಿ ಹೋದಂತೆ ಅನಿಸುತ್ತಿತ್ತು. ಹಾಗೆ ಅವನ ಜೀವದ್ರವ್ಯವು ಸೋರಿಹೋದಾಗ ಅವನು ಏಕಾಂಗಿಯಾಗಿ ಕುಳಿತು ತನ್ನ ಕೋಣೆಯ ಬಾಗಿಲನ್ನು ಬಂದ್ ಮಾಡಿ ಇನ್ನಷ್ಟು ಏಕಾಂಗಿಯಾಗಿ ಉಳಿಯಲು ಇಷ್ಟ ಪಡುತ್ತಿದ್ದ. ಆ ಸಂದರ್ಭದಲ್ಲಿ ಯಾರಾದರೂ ಬಂದು ತನ್ನ ಏಕಾಂತವನ್ನು ಅತಿಕ್ರಮಿಸ ಬಾರದೆಂದು ಅವನು ಎಚ್ಚರ ವಹಿಸುತ್ತಿದ್ದ.

ಆಗಲೇ ಅವಳು ಆ ಕೋಣೆಯೊಳಗೆ ಕಾಲಿರಿಸಿದ್ದು. ಮುಂದೇನು ಮಾಡಬೇಕೆಂದು ಯಾವುದೇ ನಿರ್ಧಾರವನ್ನು ಕೈಗೊಳ್ಳದೆ ಅವಳು ಅವನ ಬೆನ್ನ ಹಿಂದೆ ನಿಂತಳು. ನಂತರ ಸಾವಕಾಶವಾಗಿ ಸದ್ದಿಲ್ಲದಂತೆ ನಡೆದು ಅವನ ಪಕ್ಕದಲ್ಲಿದ್ದ ಕುರ್ಚಿಯ ಮೇಲೆ ಕುಳಿತಳು. ಲ್ಯಾಪ್‌ಟಾಪಿನ ಎದುರಿಗೆ ಕುಳಿತಿದ್ದ ಅವನು ಮೈಕನ್ನು ಸರಿಪಡಿಸಿಕೊಂಡು ತನ್ನದೇ ಆದ ಕ್ರಮದಲ್ಲಿ ಡಿಕ್ಟೇಶನ್ ಹೇಳಲು ಆರಂಭಿಸಿದ. 'ಇನ್ ದ ಕೋರ್ಟ್ ಆಫ್' ಎಂದು ಅವನು ಹೇಳಿದ ಕೂಡಲೇ ಅವಳಿಗೆ ತಲೆನೋವು ಬರುತ್ತಿತ್ತು. ಮತ್ತೆ ಮುಂದುವರೆದಂತೆ 'ಪ್ಲೇನ್‌ಟಿಫ್' ಎಂದು ಹೇಳಿದ ಕೂಡಲೇ 'ನೀನಿನ್ನು ಹೊರಡಬಹುದು' ಎಂಬ ಸೂಚನೆಯಂತೆ ಅವಳಿಗೆ ತೋರುತ್ತಿತ್ತು. ಇಂದೂ ಕೂಡ ಅವನು ತನ್ನನ್ನು ಕಡೆಗಣಿಸಿ ಸಾಗಹಾಕುವ ಪ್ರಯತ್ನ ಮಾಡುತ್ತಿದ್ದಾನೆ ಎಂದು ಅವಳಿಗೆ ಖಚಿತವಾಯಿತು. ಆದ್ದರಿಂದ ಅವಳು ಸರಕ್ಕನೆ ಮೈಕಿನ ಮೇಲೆ ಕೈ ಇಟ್ಟು, 'ಈವೊತ್ತು ನೀವು ನನ್ನ ಮಾತು ಕೇಳಲೇ ಬೇಕು' ಎಂದಳು.

'ಹೇಳು...' ಎಂದ ಅವನು.

'ಎಷ್ಟು ಸಾರಿ ಹೇಳಿದ್ದನ್ನೇ ಹೇಳುವುದು? ಅವಳಿಗೆ ಇಂದಿಗೆ ಇಪ್ಪತ್ತೆಂಟು ತುಂಬಿತು. ಇಂದು ಅವಳ ಬರ್ತಡೇ ನೆನಪಿದೆಯಾ?' ಎಂದು ಕೇಳಿದಳು.

'ಆಯಿತು...' ಎಂದ ಅವನು ಕೈಯಾಡಿಸುತ್ತಾ.

'ಏನು ಆಯಿತು?' ಅವಳಿಗೆ ರೇಗಿ ಹೋಯಿತು. 'ನಾಳೆಯಿಂದ ಅವಳಿಗೆ ಇಪ್ಪತ್ತೊಂಬತ್ತು ಆರಂಭವಾಗುತ್ತೆ ಗೊತ್ತಾ?'

'ಇದೊಳ್ಳೆ ತಮಾಷೆ ಆಗಿ ಹೋಯಿತಲ್ಲಾ. ಇಪ್ಪತ್ತೆಂಟು ತುಂಬಿದ ಮೇಲೆ ಇಪ್ಪತ್ತೊಂಬತ್ತಕ್ಕೆ ಬೀಳಲೇ ಬೇಕಲ್ಲಾ?' ಅವನು ನಕ್ಕು ಬಿಟ್ಟ. ತಾನು ಜೋಕರ್ ತರ ಮಾತನಾಡುತ್ತಿರುವನೇನೋ ಎಂಬ ಗೊಂದಲದ ನಡುವೆ, ಅಂತಹ ಸರಳ ವಿಷಯ ಗೊತ್ತಿಲ್ಲದ ಅವಳ ಜೊತೆಯಲ್ಲಿ ತಾನು ಇಷ್ಟು ವರ್ಷ ಹೇಗೆ ಬದುಕಿದೆ ಎಂದು ಅವನಿಗೆ ಅಪಾರ ಆಶ್ಚರ್ಯ ಆಗಿ ಹೋಯಿತು. ಅವಳು ಏನನ್ನೂ ಮಾಡದ, ಏನನ್ನೂ ಹೇಳದ ಅಸಹಾಯ ಪರಿಸ್ಥಿತಿಯಲ್ಲಿ ತನ್ನ ಒಡಲ ಮಹಾಪೂರದ ಅಶ್ರುಬಿಂದುಗಳನ್ನು ಅವನೆದುರು ತುಳುಕಿಸಬಾರದೆಂದು ಕಾಪಿಟ್ಟುಕೊಳ್ಳುತ್ತಾ ಎದ್ದು ನಿಂತಳು.